೬. ಶಿವಮೊಗ್ಗದ ಹೊಳಲೂರಿನ ದೇವಸ್ಥಾನದ ಜಮೀನನ್ನು ಶ್ರೀಮಂತರು ಒತ್ತುವರಿ ಮಾಡಿರುವುದು.

ಶ್ರೀ ಬಿ. ಸ್ವಾಮಿರಾವ್ (ಹೊಸನಗರ).—ಮಾನ್ಯ ಅಧ್ಯಕ್ಷರೇ, ಶಿವಮೊಗ್ಗ ತಾಲ್ಲೂಕು, ಹೊಳಲೂರು ಹೋಬಳಿ ಮೇಲಿನ ಹನಸವಾಡಿ ಗ್ರಾಮದಲ್ಲಿ ಶ್ರೀ ರಾಮದೇವರ ಕೆರೆ ಇರುತ್ತೆ. ಈ ಕೆರೆ ೮೮ ಎಕರೆ ವಿಸ್ತೀರ್ಣವಿದ್ದು ಸುಮಾರು ೫೦೦ ಎಕರೆಗೆ ಹಾಯುವರಿ ಆಗುತ್ತಿತ್ತು. ಈ ಕೆರೆಯನ್ನು ತುಂಗಾ ಎಡ ನಾಲೆಯ ಭಾರಿ ನೀರು ಶೇಖರಣೆ ಕೆರೆಯಾಗಿ ಪರಿವರ್ತಿಸಿದ್ದು ಸರಿಯಷ್ಟೆ. ಈಗ ಹಾಲಿ ಕೆರೆಯನ್ನು ಅಕ್ರಮವಾಗಿ ಅನೇಕ ಶ್ರೀಮಂತ ವರ್ಗದವರು ಒತ್ತುವರಿ ಮಾಡಿದ್ದು, ಕೆರೆಯ ಕೋಡಿಯನ್ನು ಸಹ ಶ್ರೀಮಂತರ ಒತ್ತಡದೀದ ೨–೩ ಅಡಿ ತಗ್ಗಿಸಿ ಕಟ್ಟಿಸಿದ್ದು ಬೆಳಕಿಗೆ ಬಂದಿದೆ.

ಹಾಯುವರಿ ಆಚ್ಚುಕಟ್ಟು ರೈತರಿಗೆ ಕೆರೆಗೆ ಸಾಕಷ್ಟು ನೀರಿಲ್ಲದೆ ತೊಂದರೆಯಾಗಿದೆ. ಈ ರೀತಿ ಹೆಚ್ಚು ಉಪಯುಕ್ತವಾದ ಕೆರೆ ನೀರನ್ನೆಲ್ಲಾ ಶ್ರೀಮಂತರು ಹಾಗೂ ಬಲಾಢ್ಯರು ಕಬಳಿಸಿ ಬಡ ರೈತರಿಗೆ ದ್ರೋಹ ಮಾಡುವುದರ ಜೊತೆಗೆ ಕಾನೂನು ಬಾಹಿರ, ದೇಶದ್ರೋಹದ ಕೆಲಸ ಮಾಡುತ್ತಿದ್ದಾರೆ. ಇಂಥ ಹಗರಣದ ಮೇಲೆ ಸೂಕ್ತ ಕ್ರಮ ತೆಗೆದುಕೊಂಡು ಒತ್ತುವರಿ ಕೆರೆಯನ್ನು ಬಿಡಿಸಿ ಕೆರೆಯ ಕೋಡಿಯನ್ನು ಮೂಲ ರೀತಿಯಲ್ಲಿ ಉಳಿಸಿಕೊಡುವಂತೆ ಸರ್ಕಾರದ ಗಮನವನ್ನು ಸೆಳೆದು ಒತ್ತಾಯಿಸುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಇಲಾಖಾ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಶ್ರೀ ಸ್ವಾಮಿರಾವ್ ಈಗ ಏನು ಹೇಳಿದ್ದಾರೆ ಅದರ ಬಗ್ಗೆ ತೀವ್ರ ಗಮನವನ್ನು ಹರಿಸುತ್ತೇನೆ.

೭. ಬಾಗೇಪಲ್ಲಿ ಆಸ್ಪತ್ರೆಯಲ್ಲಿ ವೈದ್ಯರು ಎರಡು ಗಂಟೆಗಳ ಕಾಲ ಮಾತ್ರ ಕೆಲಸ ಮಾಡುವುದರ ಬಗ್ಗೆ

ಶ್ರೀ ಬಿ. ನಾರಾಯಣಸ್ವಾಮಿ.—ಮಾನ್ಯ ಅಧ್ಯಕ್ಷರೇ, ಬಾಗೇಪಲ್ಲಿ ಕ್ಷೇತ್ರದಲ್ಲಿ ಸರ್ಕಾರಿ ಆಸ್ಪತ್ರೆಗಳಲ್ಲಿ ಒಂದು ದಿವಸಕ್ಕೆ ಕೇವಲ ಎರಡು ಗಂಟೆಗಳ ಕಾಲ ಕೆಲಸ ಮಾಡುತ್ತಿದ್ದಾರೆ. ಬೆಳಿಗ್ಗೆ ೧೦ ಗಂಟೆಗೆ ಬಂದರೆ ೧೨ ಗಂಟೆಗೆ ವಾಪಸ್ಸು ಹೋಗುತ್ತಾರೆ. ಸರ್ಕಾರದ ವೈದ್ಯರುಗಳಿಗೆ ೨ ಗಂಟೆ ಕಾಲ ಕೆಲಸ ಮಾಡುವುದಕ್ಕೆ ಸಂಬಳ ಕೊಡುತ್ತೀರಾ ಅಥವಾ ತಿಂಗಳು ಪೂರ್ತಿ ಕೆಲಸ ಮಾಡುವುದಕ್ಕೆ ಕೊಡುತ್ತೀರಾ ದಯವಿಟ್ಟು ತಿಳಿಸಿರಿ ? ಸರ್ಕಾರಿ ವೈದ್ಯರು ಖಾಸಗಿ ವೈದ್ಯಶಾಲೆಗಳನ್ನು ನಡೆಸಲು ಸರ್ಕಾರದವರು ಅನುಮತಿ ಕೊಟ್ಟಿದ್ದಾರೋ ಇಲ್ಲವೋ ದಯವಿಟ್ಟು ತಿಳಿಸುವರೆ ? ಅದೇ ರೀತಿ ನನ್ನ ಕ್ಷೇತ್ರದಲ್ಲಿ ಸರ್ಕಾರಿ ವೈದ್ಯರುಗಳು ಖಾಸಗಿ ವೈದ್ಯ ಶಾಲೆಗಳನ್ನು ನಡೆಸುವ ಸಂಖ್ಯೆ ಎಷ್ಟು ಎಂದು ದಯವಿಟ್ಟು ತಿಳಿಸುವರಿ ?

ಶ್ರೀ ಆರ್. ಎಲ್. ಜಾಲಪ್ಪ (ಸಹಕಾರ ಮಂತ್ರಿಗಳು).—ಮಾನ್ಯ ಸದಸ್ಯರು ಈಗ ತಿಳಿಸಿದಂಥ ವಿಷಯವನ್ನು ಸಂಬಂಧಪಟ್ಟ ಮಂತ್ರಿಗಳ ಗಮನಕ್ಕೆ ತಂದು ಅದರ ಮೇಲೆ ಕಾರ್ಯಕ್ರಮ ಕೈಗೊಳ್ಳುವಂತೆ ತಿಳಿಸುತ್ತೇನೆ.

೮. ತುಂಗಭದ್ರ ಎಡದಂಡೆ ನಾಲೆಯ ಆಚ್ಚುಕಟ್ಟು ಪ್ರದೇಶದ ರೈತರಿಗಾಗುತ್ತಾದ ತೊಂದರೆಯ ಬಗ್ಗೆ

ಶ್ರೀ ಶ್ರೀರಂಗದೇವರಾಯಲು.—ಸನ್ಮಾನ್ಯ ಅಧ್ಯಕ್ಷರೇ, ರಾಯಚೂರು ಜಿಲ್ಲೆಯ ಗಂಗಾವತಿ, ಸಿಂಧನೂರು, ಮಾನ್ವಿ, ತಾಲ್ಲೂಕುಗಳು ಹಾಗೂ ರಾಯಚೂರು ತಾಲ್ಲೂಕಿನ ಕೆಲವು ಭಾಗಗಳಲ್ಲಿ ಬರತಕ್ಕಂಥ ತುಂಗಭದ್ರ ಎಡದಂಡೆ ನಾಲೆಯ ಕೆಳಗಿನ ಆಚ್ಚುಕಟ್ಟು ಪ್ರದೇಶದಲ್ಲಿ ಬರತಕ್ಕ ಜಮೀನಿನಲ್ಲಿ ಆಗಿರುವ ಬೆಳೆಗೆ ನೀರೊದಗಿಸುವ ಸಂಬಂಧದಲ್ಲಿ ಮಂಬ್ಯೆ ಇಂಜಿನಿಯರ್‌ರವರು ಒಂದು ಹೇಳಿಗೆ ನೀಡಿ ಫೆಬ್ರವರಿ ೨೮ನೇ ತಾರೀಖಿನಂದು ನಾಲೆಯನ್ನು ಮುಚ್ಚಿಲಾಗುವುದೆಂದು ತಿಳಿಸಿದ್ದರು ಈ ಸಂದರ್ಭದಲ್ಲಿ ಜಿಲ್ಲೆಯ ಶಾಸಕರು ರೈತ ಮುಖಂಡರುಗಳು ಮಾನ್ಯ ಲೋಕೋಪಯೋಗಿ ಇಲಾಖೆಯ ಮಂತ್ರಿಗಳನ್ನು ಭೇಟಿ ಮಾಡಿ ಪರಿಸ್ಥಿತಿಯನ್ನು ವಿವರಿಸಿದಾಗ ಕೊನೆಯ ಹನಿ ಇರುವವರೆಗೂ ಸದರಿ ನಾಲೆಯನ್ನು ಮುಚ್ಚುವುದಿಲ್ಲವೆಂಬುದಾಗಿ ಆಶ್ವಾಸನೆಯನ್ನು ಜಿಲ್ಲೆಯ ಶಾಸಕರು ಹಾಗೂ ರೈತ ಮುಖಂಡರುಗಳಿಗೆ